**O.S** 42/2010

**PW**-3

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ **05.06.2024** ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ 4 ರಿಂದ 8 ರವರ ಪ್ರತಿವಾದಿಗಳ ಪರ ವಕೀಲರಾದಃ ಶ್ರೀ ಜೆ.ಪಿ. ರವರಿಂದ**

ನಾನು ಮೂಲತಃ ಇಟ್ಟುವಳ್ಳಿ ಗ್ರಾಮದವಳು, ನಾನು ಆಲ್ದೂರಿನವರನ್ನು ಮದುವೆಯಾಗಿರುತ್ತೇನೆ. ಸುಮಾರು 50 ವರ್ಷಗಳ ಹಿಂದೆ ನನಗೆ ಮದುವೆಯಾಗಿರುತ್ತದೆ. ನಮ್ಮ ಮನೆ ಆಲ್ದೂರಿನ ಗ್ರಾಮದ ಮಾರಮ್ಮ ದೇವಸ್ಥಾನದ ರಸ್ತೆಯಲ್ಲಿರುತ್ತದೆ. ವಾದಿಯ ಮನೆ ಬೇರೆ ಬೀದಿಯಲ್ಲಿರುತ್ತದೆ ಎಂದರೆ ಸರಿಯಲ್ಲ. ವಾದಿಯು ಗದ್ದೆಯ ಸಂಬಂಧವಾಗಿ ಈ ದಾವೆಯನ್ನು ಹೂಡಿರುತ್ತಾರೆ. ಯಾವ ವಿಷಯಕ್ಕಾಗಿ ಗದ್ದೆಯ ಮೇಲೆ ಈ ದಾವೆಯನ್ನು ಹೂಡಿರುತ್ತಾರೆ ನನಗೆ ಗೊತ್ತಿಲ್ಲ. ನಾನು ಬಸಪ್ಪರವರನ್ನು ನೋಡಿರುವುದಿಲ್ಲ. ಬಸಪ್ಪರವರು ಯಾವ ಊರಿನಲ್ಲಿ ವಾಸ ಮಾಡುತ್ತಿದ್ದರು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಪೊಲೀಸ್ ಬಸಪ್ಪ ಆಲ್ದೂರಿನಲ್ಲೇ ವಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಬಸಪ್ಪರವರು ಪೊಲೀಸ್ ಆಗಿದ್ದರು ಎಂದೆ ನಿಜ. ಬಸಪ್ಪರವರು ಮೈಸೂರಿನಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಆಲ್ದೂರಿಗೆ ಆಗಾಗ್ಗೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ಬಸಪ್ಪರವರು ತಮ್ಮ ಪೊಲೀಸ್ ವೃತ್ತಿಯನ್ನು ಮೈಸೂರಿನಲ್ಲಿ ಮಾಡುತ್ತಿದ್ದರು ಎಂದರೆ ನಿಜ. ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ಖಾಯಂ ಆಗಿ ಬಸಪ್ಪರವರು ವಾಸ ಮಾಡುತ್ತಿದ್ದರು ಎಂದರೆ ನಿಜ, ಸಾಕ್ಷಿಯು ಮುಂದುವರಿದು ಆದರೂ ಸಹಾ ಬಸಪ್ಪರವರು ಆಲ್ದೂರಿಗೆ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ.

ನಾನು ಪೊಲೀಸ್ ಬಸಪ್ಪರವರ ಹೆಂಡತಿಯನ್ನು ನೋಡಿರುತ್ತೇನೆ, ಅವರ ಹೆಸರು ರುದ್ರಮ್ಮ. ಪೊಲೀಸ್ ಬಸಪ್ಪರವರ ಹೆಂಡತಿ ರುದ್ರಮ್ಮ ಅಲ್ಲ ಪುಟ್ಟಮ್ಮ ಎಂದರೆ ಸಾಕ್ಷಿಯು ರುದ್ರಮ್ಮ ಸತ್ತ ಆದರೆ ಪುಟ್ಟಮ್ಮನ ಬಗ್ಗೆ ತಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪರವರು ಪುಟ್ಟಮ್ಮ ರವರನ್ನು ಮದುವೆಯಾಗಿ ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ಅವರ ಜೊತೆ ವಾಸವಿದ್ದರು ಎಂದರೆ ಸರಿಯಲ್ಲ. ರುದ್ರಮ್ಮ ರವರನ್ನು

ಪೊಲೀಸ್ ಬಸಪ್ಪ ರವರು ಎಂದಿಗೂ ಸಹಾ ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರಿದು ಪೊಲೀಸ್ ಬಸಪ್ಪ ಹಾಗೂ ರುದ್ರಮ್ಮರವರಿಗೆ ಒಂದು ಮಗು ಹುಟ್ಟಿರುತ್ತದೆ ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪ ಮತ್ತು ರುದ್ರಮ್ಮ ರವರಿಗೆ ಯಾವುದೇ ಮಗು ಹುಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಪೊಲೀಸ್ ಬಸಪ್ಪ ರವರ ಮಗ ಎನ್ ಬಿ ಶಿವಣ್ಣ ರವರನ್ನು ನೋಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ತಮಗೆ ಗೊತ್ತಿಲ್ಲ ಎಂದು ನುಡಿಯತ್ತಾರೆ. ಪೊಲೀಸ್ ಬಸಪ್ಪ ರವರಿಗೆ ಎನ್ ಬಿ ಶಿವಣ್ಣ ಒಬ್ಬನೇ ಮಗ ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪ ಮತ್ತು ಪುಟ್ಟಮ್ಮ ದಂಪತಿಗಳಿಗೆ ಜನಿಸಿದ ಒಬ್ಬನೇ ಮಗ ಎನ್ ಬಿ ಶಿವಣ್ಣ ಎಂದರೆ ಸರಿಯಲ್ಲ. ಎನ್ ಬಿ ಶಿವಣ್ಣ ರವರು ಆಲ್ದೂರಿಗೆ ಬಂದು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪೊಲೀಸ್ ಬಸಪ್ಪ ರವರ ಜಮೀನನ್ನು ಎನ್ ಬಿ ಶಿವಣ್ಣ ರವರೇ ಬಂದು ವ್ಯವಸಾಯ ಮಾಡಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ನ್ಯಾಯಾಲಯದ ಪ್ರಶ್ನೆಃ ಪೊಲೀಸ್ ಬಸಪ್ಪ ರವರ ಜಮೀನಿನ ಸರ್ವೆ ನಂಬರ್ ನಿಮಗೆ ಗೊತ್ತೆ?

ಉತ್ತರ ಃ ನನಗೆ ಗೊತ್ತಿಲ್ಲ.

ಆಲ್ದೂರು ಬಸಪ್ಪನೇ ಬೇರೆ ಹಾಗೂ ಪೊಲೀಸ್ ಬಸಪ್ಪನೇ ಬೇರೆ ಎಂದರೆ ಸರಿಯಲ್ಲ, ಸಾಕ್ಷಿಯು ಇಬ್ಬರೂ ಒಬ್ಬರೇ ಎಂದು ನುಡಿಯುತ್ತಾರೆ. ಪ್ರಭುಸ್ವಾಮಿ ಅಂದರೆ ವಾದಿಯು ಪೊಲೀಸ್ ಬಸಪ್ಪನ ಮಗ ಅಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಬಸಪ್ಪ ಎಂಬುವವರು ಸುಮಾರು ಜನ ಇದ್ದಾರೆ ಎಂದರೆ ನಿಜ, ಸಾಕ್ಷಿಯು ಮುಂದುವರಿದು ಇದರಲ್ಲಿ ಯಾರು ಪೊಲೀಸ್ ಬಸಪ್ಪ ಇರುವುದಿಲ್ಲ, ಪೊಲೀಸ್ ಬಸಪ್ಪ ಒಬ್ಬರೆ ಎಂದು ನುಡಿಯುತ್ತಾರೆ. ಆಲ್ದೂರಿನ ಯಾವುದೋಬೇರೆ ಬಸಪ್ಪನ ಮಗ ವಾದಿಯು ಆಗಿರುತ್ತಾನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಪೊಲೀಸ್ ಬಸಪ್ಪನ ಮಗ ಎಂದು ನುಡಿಯುತ್ತಾರೆ. ಎನ್ ಬಿ ಶಿವಣ್ಣನು ಪೊಲೀಸ್ ಬಸಪ್ಪ ರವರ ಮಗ ಆಗಿದ್ದರೂ ಸಹಾ ನನಗೆ ಈ ವಿಚಾರ ಗೊತ್ತಿದ್ದರು ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

05.06.2024.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.